# ಯಕ್ಷನು ಯಾರು?

## (ಕೇನೋಪನಿಷತ್ತಿನ ಕಥೆ-೨)

ಸ್ವಾಮಿ ವೀರೇಶಾನಂದ

(ಕೇನೋಪನಿಷತ್ತಿನಲ್ಲಿ ಬರುವ ಇನ್ನೊಂದು ಕಥೆ ಇದು. ದೇವತೆಗಳು ಮತ್ತು ಅಸುರರ ಮಧ್ಯೆ ಯುದ್ಧವಾಯಿತು. ಅಸುರರನ್ನು ಸೋಲಿಸಿದ ದೇವತೆಗಳು ಜಯದ ಹಮ್ಮಿನಿಂದ ಬೀಗುತ್ತಿದ್ದರು. ತಮಗಿಂತ ಹೆಚ್ಚಿನವರು ಯಾರೂ ಇಲ್ಲ ಎಂಬ ದುರಭಿಮಾನ ಅವರಿಗೆ. ಆಗ ಬ್ರಹ್ಮತತ್ತ್ವವೇ ಯಕ್ಷನ ರೂಪದಲ್ಲಿ ಕಾಣಿಸಿಕೊಂಡಿತು. ದೇವತೆಗಳ ಅಹಂಕಾರವನ್ನು ಹೋಗಲಾಡಿಸಿತು. ಈ ವೃತ್ತಾಂತವು ಅತ್ಯಂತ ನಾಟಕೀಯವಾಗಿದೆ. ಹೀಗಾಗಿ ಅದನ್ನು ನಾಟಕರೂಪದಲ್ಲಿಯೇ ಪ್ರಸ್ತುತಪಡಿಸುವ ಪ್ರಯತ್ನ ಮಾಡಲಾಗಿದೆ. ನಾಟಕವು ಸೃಜನಾತ್ಮಕತೆಯಿಂದ ಮೂಡಿಬರುವ ಸಲುವಾಗಿ, ಮೂಲ ಉಪನಿಷತ್ತಿನ ರೂಪದಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳಲಾಗಿದೆ. ಮೂಲ ಉಪನಿಷತ್ತನ್ನು ಅಧ್ಯಯನ ಮಾಡುವ ಆಸಕ್ತಿಯನ್ನು ಕೆರಳಿಸುವುದೇ ಈ ಬರಹದ ಉದ್ದೇಶ.)

*(ರಂಗದ ಮೇಲೆ ತಿಳಿಬೆಳಕು ಹರಡಿದೆ. **'ಆಪ್ಯಾಯಂತು ಮಮಾಂಗಾನಿ'** ಎನ್ನುವ ವೈದಿಕ ಪ್ರಾರ್ಥನಾ ಮಂತ್ರವು ದೂರದಿಂದ ಕೇಳಿಬರುತ್ತಿದೆ. ಇದರ ಹಿನ್ನೆಲೆಯಲ್ಲಿಯೇ ಧ್ವನಿಯೊಂದು ಕೇಳಿಸುತ್ತಲಿದೆ.)*

**ಹಿನ್ನೆಲೆಯ ಧ್ವನಿ :** ಕಿವಿಗಳಿಗೆ ಕಿವಿಯಾಗಿ, ಕಣ್ಣಿಗೆ ಕಣ್ಣಾಗಿ ಮಾತಿಗೆ ಮಾತಾಗಿ ಇರುವುದೇನು?

ಮನಸ್ಸಿಗೆ ಮನಸ್ಸಾಗಿ, ಬುದ್ಧಿಗೆ ಬುದ್ಧಿಯಾಗಿ, ತಿಳಿವಿಗೆ ತಿಳಿವಾಗಿ ಕಂಗೊಳಿಪುದೇನು?

ಆತ್ಮತತ್ತ್ವವೇ ಅದು, ತಿಳಿಯುವುದು, ತಿಳಿಯದುದು – ಎರಡನ್ನೂ ಮೀರಿಹುದು; ತಿಳಿಯದವನಿಗೆ ತಿಳಿದಿಹುದು, ತಿಳಿದವನು ಅರಿತಿಲ್ಲ — ಈ ಎಲ್ಲ ಭಾವನೆಗಳನ್ನು ದಾಟಿ ಹೋಗಿಹುದು. ಈ ಆತ್ಮವೇ ಬ್ರಹ್ಮವು, ಸಕಲ ಚರಾಚರದ ಮೂಲಸ್ರೋತವು, ಎಲ್ಲದರ ಗುಟ್ಟು , ಎಲ್ಲ ಕಡೆ, ಎಲ್ಲವೂ ಆಗಿರುವ ಅದನ್ನರಿತವನಿಗೇ ಇದು ಗೊತ್ತು. ನಾನೆಂಬುದೂ ಅದುವೇ, ನೀನೆಂಬುದೂ ಅದುವೇ, ಇರುವುದು ಒಂದೇ, ಇಲ್ಲ ಇಲ್ಲ ಎರಡೆಂದೇ.

*(ದೇವತೆಗಳು ಮತ್ತು ರಾಕ್ಷಸರ ಯುದ್ಧದ ದೃಶ್ಯ. ಹೊಡಿ, ಬಡಿ, ಕೊಲ್ಲು ಎನ್ನುವ ಅಟ್ಟಹಾಸದ ಕೂಗುಗಳು, ಅಯ್ಯೋ, ಅಮ್ಮಾ ಎನ್ನುವ ಆರ್ತನಾದದ ಧ್ವನಿಗಳು ಅದರೊಂದಿಗೆ ಮಿಶ್ರಿತವಾಗಿವೆ.. ಧ್ವನಿ, ಬೆಳಕು ಮತ್ತು ನೆರಳುಗಳ ಪ್ರದರ್ಶನದಿಂದ ಯುದ್ಧದ ದೃಶ್ಯವನ್ನು ತೋರಿಸಬಹುದು. ಹಿನ್ನಲೆಯಲ್ಲಿ ಶಬ್ದ: 'ನಮಗೇ ಜಯವಾಯಿತು, ನಮಗೇ ಜಯವಾಯಿತು ಹಾ! ಹಾ!' ಎನ್ನುವ ಅಟ್ಟಹಾಸ. ಗೆದ್ದ ದೇವತೆಗಳು ಒಬ್ಬೊಬ್ಬರಾಗಿ ಬೀಗುತ್ತ, ನಗುತ್ತ, ಆನಂದದಿಂದ ಬರುತ್ತಿದ್ದಾರೆ. ರಂಗದ ಎಡಭಾಗದಲ್ಲಿ ಕುಳಿತು ಮಾತನಾಡಿಕೊಳ್ಳುತ್ತಿದ್ದಾರೆ.)*

**ಅಗ್ನಿ:** ಹುಟ್ಟಡಗಿಸಿಬಿಟ್ಟೆವು ಆ ದಾನವರ ಆಟಾಟೋಪವನ್ನು. ಹುಲಿಗಳಂತೆ ಎಗರಿ ಬಂದವರು ಕುರಿಗಳಂತೆ ಹೆದರಿ ಓಡಿದರು.

**ವಾಯು:** ನಿಜ, ನಿಜ. ಘೋರರೂಪಿಗಳು ಅವರು, ಅಬ್ಬರಿಸಿ ಬಂದರು. ಬೊಬ್ಬೆ ಹೊಡೆಯುತ್ತ ಕಾದಿದರು. ಸದ್ದೇ ಇಲ್ಲದೆ ಅಡಗಿ ಹೋದರು.

**ಇಂದ್ರ :** ಯಾರದಿದು ಈ ವಿಜಯ, ಯಾರದಿದು ಈ ಮಹಿಮೆ, ಯಾರದಿದು ಈ ಗರಿಮೆ? ನಮ್ಮದೇ ನಮ್ಮದೇ, ಏಳು ಮೇಲಿನ ಲೋಕ, ಏಳು ಕೆಳಗಿನ ಲೋಕ, ಭೂಲೋಕ; ದಶದಿಕ್ಕು — ಈ ಎಲ್ಲವೂ ಈಗ ನಮ್ಮದೇ. ನಮ್ಮ ಸಮರಾರಿಹರು? ನಮ್ಮ ಎದುರಿಗೆ ಬಂದು ನಿಲ್ಲುವವರು ಯಾರು? ಇಡೀ ಸೃಷ್ಟಿಯೇ ಇಹುದು ನಮ್ಮ ಪದತಲದಲ್ಲಿ. ದೇವತೆಗಳೇ ಒಡೆಯರು, ದೇವತೆಗಳೇ ಎಲ್ಲದರ ಅಧಿಪತಿಗಳು. ಆ ದೇವತೆಗಳ ನಾಯಕನು, ಸರ್ವಲೋಕ ವಂದಿತನು ಯಾರು ಯಾರು? ನಾನೇ ನಾನೇ.

**ಇತರ ದೇವತೆಗಳು:** ಹೌದು ಜೀಯಾ, ಹೌದು ಒಡೆಯಾ, ಹೌದು ನೃಪನೇ, ನೀನೇ ನಮ್ಮ ಜಯದ ಕಾರಣನು, ದೇವತೆಗಳಾದ ನಮ್ಮ ಮಹಿಮೆಯನ್ನು ಮೀರುವವರು ಯಾರಾದರೂ ಇದ್ದಾರೇನು?

**ಅಗ್ನಿ:** ನಮ್ಮ ಶಕ್ತಿಯೇನು? ನಮ್ಮ ಸಾಮರ್ಥ್ಯವೇನು? ಓಜಸ್ಸೇನು, ತೇಜಸ್ಸೇನು? ಇವೆಲ್ಲದಕ್ಕೂ ಮಿತಿಯುಂಟೇ, ಎಲ್ಲೆಯುಂಟೆ?

**ವಾಯು:** ಪಾತಾಳವಾಸಿಗಳು, ಭೂಮಂಡಲದ ಮಾನುಷರು, ಗಂಧರ್ವ, ಕಿನ್ನರ, ಸಿದ್ಧ, ಪಿತೃಗಳೆಲ್ಲರೂ ನಮ್ಮ ದಾಸರು. ನಾವು ನಡೆಸಿದ ಹಾಗೆ ಈ ಸೃಷ್ಟಿ, ನಾವು ಆದೇಶವಿತ್ತ ಹಾಗೆ ಚಂದ್ರ, ಸೂರ್ಯ, ನಕ್ಷತ್ರಗಳ ಬೆಳಕು. ಎಲ್ಲದರ ಮೇಲೂ ನಮ್ಮದೇ

ಪ್ರಭುತ್ವ. ವಿಶ್ವದೆಲ್ಲ ಆಗುಹೋಗುಗಳಿಗೂ ನಾವೇ ಶಕ್ತಿದಾತರು, ಆಕಾಶದಂತೆ ನಮ್ಮ ಮಹಿಮೆ, ಸಾಗರದ ಆಳದಂತೆ ನಮ್ಮ ಗರಿಮೆ, ಅಪಾರ ವಿಸ್ತಾರ. ಅಳೆಯಲಾಗದ ಆಳ.

*(ದೇವತೆಗಳೆಲ್ಲರೂ ಗಹಗಹಿಸಿ ನಗುತ್ತ ಮಾತನಾಡಿಕೊಳ್ಳುತ್ತಿರುವ ಧ್ವನಿ ಸಣ್ಣದಾಗಿ ಕಡಮೆಯಾಗುವುದು, ರಂಗದ ಬೆಳಕು ಬಲಭಾಗಕ್ಕೆ ಬೀಳುವುದು. ದೇವತೆಗಳ ಮಾತುಕತೆ ಸಣ್ಣದಾಗಿ ಮುಂದುವರೆಯುತ್ತಲೇ ಇರುವುದು. ನಿಧಾನವಾಗಿ ಧೂಮದ ಪ್ರವಾಹದ ಮಧ್ಯೆ, ಬೆಳಕಿನ ಗೊಂಬೆಯೊಂದು ಕಾಣಿಸಿಕೊಳ್ಳುವುದು. ಆ ಬೆಳಕಿನ ಪುಂಜವು ವ್ಯಕ್ತಿಯ ಆಕೃತಿಯನ್ನು ಪಡೆಯುವುದು. ದಿವ್ಯವೇಷಭೂಷಿತನಾದ, ಗಂಭೀರ ಯಕ್ಷಮೂರ್ತಿಯು ನಿಧಾನವಾಗಿ ಕಾಣಿಸಿಕೊಳ್ಳುವುದು. ಹಿನ್ನೆಲೆಯಲ್ಲಿ ಓಂಕಾರ, ವೇದ ಮಂತ್ರಗಳು, 'ತತ್ ತ್ವಮ್ ಅಸಿ', 'ಅಹಂ ಬ್ರಹ್ಮಾಸ್ಮಿ' ಮಹಾವಾಕ್ಯಗಳ ಗಂಭೀರ ಉಚ್ಚಾರಣೆ – ಇವೆಲ್ಲವೂ ವಾದ್ಯ ಸಂಗೀತದ ಹಿನ್ನೆಲೆಯಲ್ಲಿ ಕೇಳಿಬರುತ್ತಿರುವುದು. ದೇವತೆಗಳು ಅಚ್ಚರಿಯಿಂದ ಈ ದಿವ್ಯರೂಪವನ್ನೇ ನೋಡುತ್ತಿದ್ದಾರೆ.)*

**ಅಗ್ನಿ:** ಎಂಥ ಉಜ್ವಲ ಮೂರ್ತಿ! ಎಂಥ ದಿವ್ಯ ಸನ್ನಿಧಾನ! ಇದಾರು ಈ ಮಹಾಪುರುಷ?!

**ವಾಯು:** ಹೌದಲ್ಲವೆ? ಇಂಥ ತೇಜಸ್ಸನ್ನು, ಗಾಂಭೀರ್ಯವನ್ನು ನಾನು ಎಲ್ಲಿಯೂ ಯಾರಲ್ಲೂ ನೋಡಿಲ್ಲ. ನಮ್ಮ ಕಡೆಯೇ ದಿಟ್ಟಿಸಿನೋಡುತ್ತಿರುವ ಈ ಭವ್ಯ ಮೂರ್ತಿ ಅದಾವುದು?

**ಇಂದ್ರ:** ಆಹಾ! ನಾನು ದೇವೇಂದ್ರ. ನನಗೆ ಗೊತ್ತಿಲ್ಲದ್ದು ಏನೂ ಇಲ್ಲ! ಆದರೆ, ಇಂಥ ಭವ್ಯ ದಿವ್ಯ ರೂಪವನ್ನು ಮೊದಲ ಬಾರಿಗೆ ನಾನು ನೋಡುತ್ತಿದ್ದೇನೆ. ನನ್ನ ಕೈಗಳು ತಾವಾಗಿಯೇ ಈ ಜ್ಯೋತಿರೂಪಕ್ಕೆ ನಮಿಸುತ್ತಿವೆ. ನನ್ನ ಶಿರಸ್ಸು ತಾನಾಗಿಯೇ ಬಾಗುತ್ತಿದೆ. ಮನಸ್ಸು ವಿಸ್ಮಯ, ಅಚ್ಚರಿ, ಗೌರವ, ವಿನೀತ ಭಾವಗಳಿಂದ ತುಂಬಿಹೋಗಿದೆ. ಯಾರಿವನು? ಯಾರಿವನು?

(ಸ್ವಲ್ಪ ಹೊತ್ತು ಯೋಚಿಸಿದ ನಂತರ) ಅಗ್ನಿದೇವಾ!

**ಅಗ್ನಿ :** ಪ್ರಭೂ!

**ಇಂದ್ರ:** ನೀನು ಬಹಳ ಬುದ್ಧಿವಂತ, ಪರಾಕ್ರಮಶಾಲಿ. ನಡೆದುದೆಲ್ಲವನ್ನೂ ತಿಳಿಯುವ ಜಾತವೇದನು ನೀನು. ಎಂದಿಗೂ ನಮ್ಮೆಲ್ಲರ ಮುಂದೆ ಸಾಗುವ ಅಗ್ನಿಯು ನೀನು. ವೇದಗಳಲ್ಲಿ ಮೊದಲ ದೇವತೆಯೆಂದು ನಿನ್ನನ್ನೇ ಸ್ತುತಿಸಿದ್ದಾರೆ. ಈ ಯಕ್ಷನಂತೆ ಕಾಣುವ ರೂಪವು ಯಾವುದೆಂದು ಕಂಡುಹಿಡಿಯಲು ನೀನೇ ಸಮರ್ಥ. ಹೋಗಿ ಬಾ, ಅಗ್ನಿ, ತಿಳಿದು ಬಾ, ಈ ರೂಪ ಯಾವುದೆಂದು.

**ಉಳಿದ ದೇವತೆಗಳು :** ಹೌದು, ಹೌದು, ಅಗ್ನಿಯೇ, ನೀನೇ ಸಮರ್ಥನು, ನೀನೇ ಸಮರ್ಥನು. ಹೋಗಿ ಬಾ, ಹೋಗಿ ಬಾ. ಆ ಯಕ್ಷನು ಅದಾರೆಂದು ತಿಳಿದುಬಾ.

(ಅಗ್ನಿಯು ನಿಧಾನವಾಗಿ ಗರ್ವದಿಂದ ಯಕ್ಷನ ಹತ್ತಿರ ಬರುತ್ತಾನೆ. ಯಕ್ಷನು ಅವನ ಕಡೆ ನೋಡುವುದೂ ಇಲ್ಲ, ಮಾತನಾಡುವುದೂ ಇಲ್ಲ. ಅಗ್ನಿಯು ದರ್ಪದಿಂದ ಯಕ್ಷನ ಮುಂದೆ ನಿಂದಿರುತ್ತಾನೆ. ಬಹಳ ಕಾಲ ಕಳೆಯುತ್ತದೆ. ಅಗ್ನಿಯು ಯಕ್ಷನ ಎದುರಿಗೆ ಮೌನಿಯಾಗಿ ನಿಂತಿರುತ್ತಾನೆ. ಅವನ ಬಾಯಿಯಿಂದ ಮಾತು ಹೊರಡುತ್ತಿಲ್ಲ. ಕಡೆಗೆ ಯಕ್ಷನೇ ಅಗ್ನಿಯನ್ನು ಮಾತ ನಾಡಿಸುತ್ತಾನೆ.)

**ಯಕ್ಷ :** (ಒಂದು ರೀತಿಯ ಅಸಹನೆಯ ಭಾವನೆಯಿಂದ) ಯಾರು ನೀನು?

**ಅಗ್ನಿ:** (ಆಶ್ಚರ್ಯ ಮತ್ತು ಕೋಪಗಳಿಂದ) ನಾನಾರೆಂದು ಗೊತ್ತಿಲ್ಲವೇ, ಇದೇನಿದು?! ನಿಜವಾಗಲೂ ನಾನು ಯಾರೆಂದು ನಿನಗೆ ಗೊತ್ತೇ ಇಲ್ಲವೆ? ಅಗ್ನಿ ನಾನು. ಅಗ್ನಿ. ನನ್ನನ್ನು ಜಾತ ವೇದವೆಂದೂ ಕರೆಯುತ್ತಾರೆ. ಎಲ್ಲ ಲೋಕಗಳಲ್ಲಿ ಸುಪೂಜ್ಯನು ನಾನು, ಪ್ರಸಿದ್ಧನು ನಾನು, ಶಕ್ತಿವಂತನು ನಾನು.

**ಯಕ್ಷ :** ಓಹೋ, ಇರಲಿ, ಇರಲಿ. ಏತಕ್ಕೆ ನೀನು ಪ್ರಸಿದ್ಧನು? ಅಂಥಹುದು ಏನುಂಟು ನಿನ್ನಲ್ಲಿ ಸಾಮರ್ಥ್ಯ, ಪರಾಕ್ರಮ?

**ಅಗ್ನಿ:** ಸರ್ವಲೋಕಗಳಲ್ಲಿಯೂ ಪ್ರಸಿದ್ಧನಾದ ನನ್ನ ಪರಾಕ್ರಮವೇನೆಂದು ಕೇಳುವೆಯಲ್ಲ! ಇದು ಆಶ್ಚರ್ಯವೇ ಸರಿ. ಎತ್ತೆತ್ತ, ಏನು ಏನು ಇದೆಯೋ, ಅದೆಲ್ಲವನ್ನೂ ಸುಟ್ಟೇನು. ಸುಟ್ಟು ನಿಶ್ಶೇಷವನ್ನಾಗಿ ಮಾಡಿಬಿಟ್ಟೇನು. ಬೂದಿಯನ್ನಾಗಿಸಿಬಿಟ್ಟೇನು. ಇದು ನನ್ನ ಶಕ್ತಿ. ಈ ಸೃಷ್ಟಿಯಲ್ಲಿಯೇ ಯಾರಿಗೂ ಇಲ್ಲದ ಅಗಣಿತ ಸಾಮರ್ಥ್ಯ ನನ್ನದು.

**ಯಕ್ಷ :** ಹೌದೇನು, ಬಹಳ ಒಳ್ಳೆಯದು, ಬಹಳ ಒಳ್ಳೆಯದು, (ಅಲ್ಲಿಯೇ ಪಕ್ಕದಲ್ಲಿ ಬಿದ್ದಿದ್ದ ಒಂದು ಹುಲ್ಲುಕಡ್ಡಿಯನ್ನು ಅಗ್ನಿಯ ಮುಂದಿಟ್ಟು) ಇಡೀ ಸೃಷ್ಟಿಯನ್ನೇ ಸುಟ್ಟು ಬೂದಿ ಮಾಡಿಬಿಡುವೆ ನೆಂಬ ಸೊಕ್ಕಿನ ಮಾತನಾಡುವೆಯಲ್ಲ! ಇದೋ, ಈ ಅತಿ ಸಣ್ಣ ಹುಲ್ಲಿನ ಕಡ್ಡಿ, ಬಹಳ ಕ್ಷುದ್ರವಾದುದು – ಇದನ್ನು ಸುಡುವೆಯೇನು?

**ಅಗ್ನಿ:** (ಅಟ್ಟಹಾಸದಿಂದ) ಈ ಹುಲ್ಲುಕಡ್ಡಿಯನ್ನು ಸುಡಬೇಕೇ. ಇದೋ, ಇದೋ, (ಮುನ್ನುಗ್ಗುವನು) (ಮನಸ್ಸಿನಲ್ಲಿಯೇ) ಇದೇನಿದು, ಆಶ್ಚರ್ಯವಾಗುತ್ತಲಿದೆ. ಇಡೀ ಮೂರು ಲೋಕಗಳನ್ನು ದಹಿಸುವ ಸಾಮರ್ಥ್ಯವುಳ್ಳ ನನಗೆ ಈ ಕ್ಷುದ್ರವಾದ ಹುಲ್ಲುಕಡ್ಡಿಯನ್ನು ಸುಡಲು ಸಾಧ್ಯವಾಗುತ್ತಿಲ್ಲವಲ್ಲ! ನನ್ನ ಶಕ್ತಿಯೆಲ್ಲವೂ ಅಡಗಿಹೋದಂತೆ ಕಾಣುವುದಲ್ಲ! ಇದೇನಾಗಿಬಿಟ್ಟಿತು! ಏನಾಗುತ್ತಲಿದೆ ಎನಗೆ! ಈ ಯಕ್ಷನ ಎದುರಿಗೆ ನನ್ನೆಲ್ಲ ಶಕ್ತಿಯನ್ನು ಪ್ರಯೋಗಿಸಿದರೂ, ಎಲ್ಲವೂ ನಿಷ್ಪ್ರಯೋಜನವಾದಂತೆ ಕಂಡುಬರುತ್ತಿದೆಯಲ್ಲ! ಇನ್ನು ಇವನ ಹತ್ತಿರ ನಿಂತಿರುವುದು ಅವಮಾನ, ಅವಮಾನ! (ಹಿಂತಿರುಗಿ ಓಡುವನು)

**ಯಕ್ಷ:** ಓ ಅಗ್ನಿ, ಓ ಅಗ್ನಿ! ಎಲ್ಲಿಗೆ ಓಡುವೆ?

(ಅಷ್ಟರಲ್ಲಿ ಅಗ್ನಿಯು ದೇವತೆಗಳನ್ನು ಸೇರಿಕೊಂಡನು. ದೇವತೆಗಳೆಲ್ಲ ಅವನನ್ನು ಸುತ್ತುವರಿದರು)

**ದೇವತೆಗಳು:** ಏನಾಯಿತು? ಏಕಿಷ್ಟು ಗಾಬರಿ, ಅಗ್ನಿ? ಯಾರು ಈ ಯಕ್ಷ ಎಂದು ತಿಳಿದು ಬಂದೆಯೇನು?

**ಅಗ್ನಿ:** (ಹತಾಶೆಯ ಧ್ವನಿಯಲ್ಲಿ) ತಿಳಿಯಲಾರೆನು, ಆ ಯಕ್ಷ ಯಾರೆಂದು ಅರಿಯಲಾರೆನು. ದಯವಿಟ್ಟು ಬಿಟ್ಟುಬಿಡಿ ನನ್ನನು!

**ಇಂದ್ರ:** ಸರಿ, ಸರಿ, ಆ ಯಕ್ಷನ ಪ್ರಭಾವದ ಎದುರು ಸೋತು ಸುಣ್ಣವಾಗಿ ಓಡಿ ಬಂದಿರುವೆ ನೀನು. ಓ ವಾಯು, ನೀನಾದರೂ ವಿಚಾರಿಸಬಾರದೆ? ಆ ಯಕ್ಷ ಯಾರೆಂದು ತಿಳಿದುಬರಬಾರದೆ?

**ದೇವತೆಗಳು:** ಹೌದು, ಹೌದು, ಓ ವಾಯು, ಓ ವಾಯು. ಹೌದು, ಹೌದು. ನೀನೇ ಸಮರ್ಥನು, ನೀನೇ ಸಮರ್ಥನು. ಹೋಗಿ ಬಾ, ಹೋಗಿ ಬಾ. ಆ ಯಕ್ಷನು ಅದಾರೆಂದು ತಿಳಿದುಬಾ.

(ವಾಯುವು ವೇಗದಿಂದ ಹೋಗಲು ಪ್ರಯತ್ನಿಸುವನು. ಅದಾವುದೋ ಶಕ್ತಿ ಅವನನ್ನು ತಡೆದಂತೆ ಆಗಿ, ಹಿಮ್ಮೆಟ್ಟುವನು. ಕಷ್ಟಪಟ್ಟು ಹೆಜ್ಜೆ ಹಾಕುತ್ತ ಹೋಗುವನು. ಯಕ್ಷನ ಎದುರು ನಿಲ್ಲುವನು. ಬಹಳ ಹೊತ್ತು ಮಾತನಾಡಲಾರದೆ ಹಾಗೆಯೇ ಇರುವನು. ಕಡೆಗೆ ಯಕ್ಷನೇ ಮಾತನಾಡಿಸುವನು)

**ಯಕ್ಷ:** ಯಾರು ನೀನು? ಆ ಅಗ್ನಿಯೆಂಬುವನು ಓಡಿಯೇ ಹೋದ. ನೀನಾರು ಈಗ ಬಂದಿರುವೆ? ನಿನ್ನ ಸಾಮರ್ಥ್ಯವೇನು? ನಿನ್ನ ಪರಾಕ್ರಮವೇನು?

**ವಾಯು:** (ಗರ್ವದಿಂದ) ಮೂರು ಲೋಕಗಳನ್ನೂ ಹಾರಿಸಿ ಒಯ್ಯುವ ವಾಯುವೇ ನಾನು. ಎಲ್ಲವನ್ನೂ ಎತ್ತಿಹಾಕಿಬಿಡುವೆ. ಎಲ್ಲವನ್ನೂ ಒಯ್ದುಬಿಡುವೆ. ತಡೆಯಲಾರರು ಯಾರೂ ಎನ್ನನು. ಅಂತರಿಕ್ಷದಲ್ಲಿ ಸರ್ವಾಂತರ್ಯಾಮಿಯಾಗಿ ಸಂಚರಿಸುವ ಮಾತರಿಶ್ವನು ನಾನು. ಎಲ್ಲ ಕಡೆ ವಾಸನೆಯನ್ನು ಬೀರುವ ವಾಯುವೇ ನಾನು.

**ಯಕ್ಷ:** ಹಾಗೋ, ಒಳ್ಳೆಯದು, ಒಳ್ಳೆಯದು. ಹೇ ವಾಯು ದೇವನೇ, ನಿನ್ನ ಪರಾಕ್ರಮವನ್ನು ತೋರು. ಹೆಚ್ಚಿನದೇನನ್ನೂ ಕೇಳುತ್ತಿಲ್ಲ ನಾನು. ಇದೋ, ಈ ಹುಲ್ಲುಕಡ್ಡಿಯನ್ನು ಎತ್ತಿಕೋ ಸಾಕು. ಅಷ್ಟು ಸಾಕು.

**ವಾಯು:** (ಅಗಾಧ ವೇಗದಲ್ಲಿ ಮುನ್ನುಗ್ಗಲು ಪ್ರಯತ್ನಿಸುವನು) ಇದೇನಿದು? ಎಲ್ಲವನ್ನೂ ಕ್ಷಣಮಾತ್ರದಲ್ಲಿ ಒಯ್ಯಬಲ್ಲ ನನ್ನ ಶಕ್ತಿಯೇ ಉಡುಗುತ್ತಿಹುದಲ್ಲ! ಕ್ಷುದ್ರವಾದ ಹುಲ್ಲುಕಡ್ಡಿಯನ್ನೂ ಎತ್ತಲಾರದ ನಿಶ್ಶಕ್ತಿಯು ಕಾಡುತಿಹುದಲ್ಲ! ಏನಿದು, ಏನಾಗುತ್ತಿದೆ ನನಗೆ!? ಭಯವು ಆವರಿಸುತ್ತಿದೆ. ಇರಲಾರೆನು, ಇಲ್ಲಿ ಇನ್ನೊಂದು ಕ್ಷಣವೂ ಇರಲಾರೆ ನಾನು. (ಹಿಂದಿರುಗಿ ಓಡಿ ಬರುವನು)

(ಭಯದಿಂದ ನಡುಗುತ್ತಿರುವ ವಾಯುವಿನ ಸುತ್ತಲೂ ದೇವತೆಗಳು ಮುತ್ತುವರು.)

**ದೇವತೆಗಳು:** ಏನಾಯಿತು? ಏಕಿಷ್ಟು ಗಾಬರಿ, ವಾಯು? ಯಾರು ಈ ಯಕ್ಷ ಎಂದು ತಿಳಿದು ಬಂದೆಯೇನು?

**ವಾಯು:** (ಹತಾಶೆಯ ಧ್ವನಿಯಲ್ಲಿ) ತಿಳಿಯಲಾರೆನು, ಆ ಯಕ್ಷ ಯಾರೆಂದು ಅರಿಯಲಾರೆನು. ದಯವಿಟ್ಟು ಬಿಟ್ಟುಬಿಡಿ ನನ್ನನು!

**ಇಂದ್ರ:** ವಾಯುವೂ ನಿರ್ವೀರ್ಯನಾಗಿ ಹಿಂತಿರುಗಿ ಬಂದುಬಿಟ್ಟನು. ಇನ್ನು ನಾನೇ ಉಳಿದವನು. ನಾನೇ ಹೋಗುವೆನು. ಈ ಯಕ್ಷ ಯಾರೆಂದು ತಿಳಿದುಬರುವೆನು. ಅಗ್ನಿವಾಯುಗಳ ಶಕ್ತಿಯನ್ನೇ ಅಡಗಿಸಿದ ಆ ಯಕ್ಷನು ನಿಜವಾಗಿಯೂ ಯಕ್ಷನಲ್ಲ. ಇದರಲ್ಲಿ ಯಾವುದೋ ರಹಸ್ಯ ಅಡಗಿಹುದು. ಪರಮಪುರುಷನು ಇವನು; ದಿವ್ಯಜ್ಯೋತಿಯು ಇವನು. ಅಗ್ನಿವಾಯುಗಳು ಅಹಂ ಮದದಿಂದ ಹೋಗಿ, ಗರ್ವಭಂಗಗೊಂಡು ಹಿಂದಕ್ಕೆ ಬಂದರು. ನಾನು ಆ ರೀತಿ ಹೋಗುವುದು ಉಚಿತವಲ್ಲ. ವಿನಯದಿಂದ ಹೋಗುವೆನು, ನವಿರಾಗಿ ಕೇಳುವೆನು, ಆ ಅಪಾರ ಮಹಿಮನಲ್ಲಿ ಶರಣಾಗುವೆನು.

(ಇಂದ್ರನು ವಿನಯದಿಂದ ಯಕ್ಷನ ಬಳಿಸಾರುವನು. ನಮಸ್ಕರಿಸುತ್ತಲೇ ಹತ್ತಿರ ಬರುವನು. ಹತ್ತಿರ ಬಂದ ಒಡನೆಯೇ, ಆ ಅದ್ಭುತ ರೂಪವು ಕಣ್ಮರೆಯಾಗುವುದು.)

**ಇಂದ್ರ:** ಅಯ್ಯೋ, ಅಗ್ನಿವಾಯುಗಳ ಹತ್ತಿರ ಮಾತುಕತೆಯನ್ನಾದರೂ ಈ ಮಹಾಪುರುಷನು ಆಡಿದನು. ಆದರೆ ನನಗೆ ದರ್ಶನಭಾಗ್ಯವನ್ನೂ ಕರುಣಿಸಲಿಲ್ಲವಲ್ಲ! ಗೊತ್ತಾಯಿತು, ತಿಳಿಯಿತು. ನನ್ನ ಒಡೆತನವು ಎಲ್ಲೆಲ್ಲಿಯೂ ಇರುವುದೆಂಬ ಅಹಂಕಾರವು ನನ್ನಲ್ಲಿ ಇನ್ನೂ ಇದೆ. ಅದು ನಿರ್ನಾಮವಾಗದ ಹೊರತು, ನನಗೆ ಅವನ ದರ್ಶನವಿಲ್ಲ. ಯಕ್ಷನು ಯಾರು ಎಂದು ಹುಲು ದೇವತೆಯಾದ ನಾನು ವಿಚಾರಿಸಲು ಯತ್ನಿಸಿದೆ. ಎಂಥ ಅಲ್ಪ ಬುದ್ಧಿ ನನ್ನದು! ಎಂಥ ಕೀಳು ಅಹಂಕಾರ ನನ್ನದು. ಯಕ್ಷನ ರೂಪದಲ್ಲಿ ಕಾಣಿಸಿಕೊಂಡ, ಆ ಪರಮಪುರುಷನು ಯಾರು? ಆ ಪರಂಜ್ಯೋತಿ ಅದಾವುದು? ಹೇ ದೇವಾಧಿದೇವ, ಕೃಪೆ ಮಾಡು, ನಿನ್ನ ಅರಿವನ್ನು ಅಲ್ಪರಾದ ನಮಗೆ ತೋರಿಸು. ನಿನ್ನ ನಿಜ ರಹಸ್ಯವನ್ನು ಅನಾವರಣ ಮಾಡು. (ಕೈಯೆತ್ತಿ ಆಕಾಶದತ್ತ ಮುಖ ಮಾಡಿ, ನಮಸ್ಕರಿಸುತ್ತ ಪ್ರಾರ್ಥಿಸುವನು)

(ಆ ಯಕ್ಷನು ಯಾವ ಕಡೆ ನಿಂತಿದ್ದನೋ, ಅದೇ ಸ್ಥಳದಲ್ಲಿ, ಶೋಭಾಯಮಾನವಾದ ಸ್ತ್ರೀ ಆಕೃತಿ ಕಾಣಿಸಿಕೊಂಡಿತು. ಬಂಗಾರದಂತೆ ಬೆಳಗುತ್ತಿದ್ದ ಆ ದೇವಿಯನ್ನು ಕಂಡು ಭಕ್ತಿಯಿಂದ ಇಂದ್ರನು ನಮಸ್ಕರಿಸಿದನು)

**ಇಂದ್ರ:** ಅಮ್ಮಾ, ನೀನು ನಿಂತಿದ್ದ ಈ ಸ್ಥಳದಲ್ಲಿಯೇ ಉಜ್ವಲ ಯಕ್ಷರೂಪಿಯು ಇದ್ದಿತು. ಅದು ಮರೆಯಾಗಿ ನೀನಿಲ್ಲಿ ನಿಂತಿದ್ದೀಯೆ. ತಾಯೆ, ನೀನಾರು? ನಮ್ಮನ್ನು ಅನುಗ್ರಹಿಸಲೆಂದೇ ಬಂದಿರುವ ನಿನ್ನ ಮಹಿಮೆಯೇನು? ಆ ಯಕ್ಷನು ಯಾರು? ಅವನ ಮಹಿಮೆಯೇನು? ದಯವಿಟ್ಟು ತಿಳಿಸು, ಅಮ್ಮಾ.

**ಉಮೆ:** ಮಗೂ, ನಾನು ಉಮೆ. ಹಿಮವಂತನ ಮಗಳು, ನಾನೇ ವಿದ್ಯೆ, ನಾನೇ ಶಕ್ತಿಸ್ವರೂಪಿಣಿ, ಮಗೂ, ನಾನೇ ನಿನಗೆ

ಪರಬ್ರಹ್ಮದ ಜ್ಞಾನವನ್ನು ದಯಪಾಲಿಸುವವಳು. ಶ್ರದ್ಧಾಳುಗಳ ಅಜ್ಞಾನವನ್ನು ಕಳೆದು ಸುಜ್ಞಾನವನ್ನು ಮೂಡಿಸುವ ವಿದ್ಯಾರೂಪಿಣಿಯೇ ನಾನು. ನಾನು ಮಾತ್ರವೇ ಆ ಯಕ್ಷನ ನಿಜವಾದ ರೂಪವನ್ನು ನಿನಗೆ ತಿಳಿಸಬಲ್ಲೆನು. ಏಕೆಂದರೆ, ಆ ಪರತತ್ತ್ವದ, ಪರಬ್ರಹ್ಮದ ಜೊತೆಯಲ್ಲಿ ಸದಾ ಇರುವ ಶಕ್ತಿಸ್ವರೂಪಿಣಿ ಶಿವೆಯೇ ನಾನು. ಮಗು, ನೀನು ಕಂಡ ಆ ಯಕ್ಷನು ನಿಜವಾಗಿಯೂ ಬ್ರಹ್ಮಸ್ವರೂಪನು. ಸಕಲ ಚರಾಚರಗಳಲ್ಲಿಯೂ ನೆಲೆಸಿರುವ ಚೈತನ್ಯರೂಪನೇ ಅವನು. ಅವನೇ ಎಲ್ಲದಕ್ಕೂ ಆಧಾರನು; ಎಲ್ಲದರ ಆಶ್ರಯನು. ಎಲ್ಲ ಜೀವಿಗಳಲ್ಲಿ ಓತಪ್ರೋತವಾದ ಮಹಾನ್ ತತ್ತ್ವವೇ ಅವನು.

**ಇಂದ್ರ:** ತಾಯೇ, ಎಂಥ ಪ್ರಮಾದವಾಗಿಬಿಟ್ಟಿತು. ಅರಿಯದೇ ನಾನು ಮತ್ತು ನನ್ನ ಸಹವರ್ತಿ ದೇವತೆಗಳೂ ಅಪಚಾರವನ್ನು ಮಾಡಿಬಿಟ್ಟೆವು. ಪರತತ್ತ್ವವೇ ನಮ್ಮ ಮುಂದೆ ಗುಪ್ತರೂಪದಲ್ಲಿ ಕಾಣಿಸಿಕೊಂಡರೂ ಅಹಂಕಾರದಲ್ಲಿ ಮೆರೆಯುತ್ತಿದ್ದ ನಾವು ಆತನ ಸ್ವರೂಪವನ್ನು ಅರಿಯಲಾರದೆ ಹೋದೆವು. ತಪ್ಪಾಯಿತು, ಅಮ್ಮಾ. ಧಿಕ್ಕಾರವಿರಲಿ ನಮ್ಮ ಅಹಂಕಾರಕ್ಕೆ!

**ಉಮೆ:** ಮಗೂ, ಈಗಲಾದರೂ ತಿಳಿದುಕೋ, ಈ ಗಹನ ಸತ್ಯವನ್ನು, ದಾನವರೊಡಗಿನ ನಿಮ್ಮ ಜಯವು ನಿಮ್ಮ ಜಯವಲ್ಲ. ಆ ಪರಮಾತ್ಮನ ಜಯವು. ನಿಮ್ಮೆಲ್ಲ ಶಕ್ತಿ, ಸಾಮರ್ಥ್ಯಗಳು ನಿಜವಾಗಿಯೂ ನಿಮ್ಮದಲ್ಲ, ಆ ಪರಮಾತ್ಮನದು. ನಿಜವಾಗಿ ನೋಡಿದರೆ, ನೀನು, ನಾನು, ಈ ಸಕಲ ಜಗತ್ತು – ಎಲ್ಲವೂ ಅವನ ರೂಪವೇ; ಅವನ ಕಾಣ್ಕೆಯೇ. ಎಲ್ಲವನ್ನೂ ಮೀರಿದ ಅವನು, ಎಲ್ಲದಕ್ಕೂ ಕಾರಣನು. ಅವನನ್ನು ನಿನ್ನಲ್ಲಿಯೇ ನೀನು ಕಂಡುಕೊಳ್ಳಬೇಕು. ನಿನ್ನ ಆತ್ಮವೇ ಅವನೆಂದು ನೀನು ಅನುಭವಿಸಬೇಕು. ಇದೇ ವಿದ್ಯೆ, ಪರಮ ವಿದ್ಯೆ, ಪರಮಾತ್ಮ ವಿದ್ಯೆ, ಬ್ರಹ್ಮವಿದ್ಯೆ!

(ಉಮೆಯು ಕಣ್ಮರೆಯಾಗುವಳು. ಈ ಹೊತ್ತಿಗೆ ದೇವತೆಗಳೂ ಅಲ್ಲಿ ಬಂದು, ಬಾಗಿ ನಿಲ್ಲುವರು. ಎಲ್ಲರೂ ಕಣ್ಣುಮುಚ್ಚಿ ಪ್ರಾರ್ಥಿಸುವರು)

*(ಹಿನ್ನೆಲೆಯಲ್ಲಿ 'ಆಪ್ಯಾಯಂತು ಮಮಾಂಗಾನಿ' ಮಂತ್ರದ ನಿನಾದವು ಮೊಳಗುವುದು. ಜ್ಯೋತಿಯ ಬೆಳಕೊಂದು ಎಲ್ಲರನ್ನೂ ಆವರಿಸುವುದು. ಆ ತೇಜಃಪುಂಜವು ಓಂಕಾರದ ರೂಪವನ್ನು ತಳೆಯುವುದು. 'ಪೂರ್ಣಮದಃ ಪೂರ್ಣಮಿದಂ' ಮಂತ್ರವು ಕೇಳಿಸುವುದು. ತದನಂತರ ಕತ್ತಲಲ್ಲಿ ಓಂಕಾರ ನಾದವು ಎಲ್ಲವನ್ನೂ ಆವರಿಸಿಕೊಳ್ಳುವುದು. ಅದರಲ್ಲಿ ದೇವತೆಗಳು ಲೀನವಾಗಿ ಹೋಗುವರು.)*




**ಶಿಷ್ಯ :** ಭಕ್ತಿ ಹೇಗೆ ಲಭಿಸುವುದು? ಒಂದು ವೇಳೆ ತನ್ನ ಮಗುವನ್ನೇ ಬೇರೆ ಯಾರಾದರೂ ಬೆಳೆಸಿದರೆ ಅದು ತನ್ನ ತಾಯಿಯನ್ನೇ 'ಅಮ್ಮಾ' ಎಂದು ಕರೆಯಲಾರದು.

**ಶ್ರೀಮಾತೆ:** ಹೌದು, ಆದ ಕಾರಣವೇ ಭಗವಂತನ ಕೃಪೆ ಅಗತ್ಯ. ಕೃಪೆಗಾಗಿ ಯೋಗ್ಯತೆ ಹೊಂದಿರುವುದು ಅಗತ್ಯ.

**ಶಿಷ್ಯ :** ಕೃಪೆ ಹೊಂದಲು ಪಾತ್ರರು, ಅಪಾತ್ರರು ಎಂದಿದೆಯೆ? ಎಲ್ಲರ ಮೇಲೂ ಕೃಪೆ ಸಮಾನವಾಗಿ ಉಂಟಾಗುವುದಿಲ್ಲವೆ?

**ಶ್ರೀಮಾತೆ:** ನದಿಯ ದಂಡೆಯ ಮೇಲೆ ಕುಳಿತು ಭಗವಂತನನ್ನು ಪ್ರಾರ್ಥಿಸಬೇಕು. ತಕ್ಕ ಸಮಯ ಬಂದಾಗ ಅವನು ನದಿಯನ್ನು ದಾಟಿಸುತ್ತಾನೆ.

**ಶಿಷ್ಯ :** ಸಮಯ ಬಂದಾಗ ಎಲ್ಲವೂ ಆಗುತ್ತದೆ; ಅದರಲ್ಲಿ ಅವನ ಕೃಪೆಯ ಅಗತ್ಯವೇನಿದೆ?

**ಶ್ರೀಮಾತೆ:** ಹಾಗಾದರೆ, ಮೀನು ಹಿಡಿಯಬೇಕಿದ್ದರೆ ಗಾಳವನ್ನೆಸೆದು ಕಾದು ಕುಳಿತುಕೊಳ್ಳಬೇಡವೆ?

**ಶಿಷ್ಯ :** ಭಗವಂತ ನಮ್ಮವನೇ ಆಗಿರುವಾಗ ಮತ್ತೆ ಕಾದು ಕುಳಿತುಕೊಳ್ಳುವುದೇಕೆ?

**ಶ್ರೀಮಾತೆ:** ಅದೇನೋ ಹೌದು. ಅದು ಅವೇಳೆಯಲ್ಲೂ ಸಾಧ್ಯ.

**ಶಿಷ್ಯ :** ಅಂದರೆ ನಮ್ಮ ಪ್ರಯತ್ನ ಎಲ್ಲಿಯವರೆಗೋ, ನಮ್ಮ ಯೋಗ್ಯತೆ ಎಷ್ಟೋ ಅದಕ್ಕನುಗುಣವಾಗಿ ಮಾತ್ರ ಭಗವಂತ ನಮ್ಮ ಬಯಕೆಯನ್ನು ಈಡೇರಿಸಿ ಹೋಗಿಬಿಡುತ್ತಾನೇನು? ಅಥವಾ ಇದಕ್ಕೆ ಹೊರತಾಗಿ ಅವನು ನಮ್ಮನ್ನು ತಮ್ಮವನೇ ಎಂದು ಭಾವಿಸಿ ಕೃಪೆ ಮಾಡುವನೆ? ಭಗವಂತ ನಮ್ಮವನೇ ಅಲ್ಲವೆ?

**ಶ್ರೀಮಾತೆ:** ಹೌದು, ಭಗವಂತ ನಮ್ಮವನೇ. ಇದು ಚಿರಕಾಲ ಸಂಬಂಧ. ಅವನು ಎಲ್ಲರಿಗೂ ಸೇರಿದವನೇ. ಭಾವನೆ ಎಂಥದೋ, ಅದರಂತೆ ಫಲ.

**ಶ್ರೀಶಾರದಾದೇವಿ ವಚನವೇದ**ದಿಂದ *(ಪು.೧೪೭–೪೮)*